ಪ್ರಾರಂಭವಾಗಬೇಕಾದರೆ ಮೂರರಿಂದ ಆರು ತಿಂಗಳುಗಳ ಕಾಲ ಆಗುತ್ತದೆ. ಕಳೆದ ಎರಡು ವರ್ಷಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಮಕ್ಕಳ ವಿದ್ಯಾಭ್ಯಾಸ ಪರಿಸ್ಥಿತಿ ಅಧೋಗತಿಗೆ ಇಳಿದಿದೆ. ಇದನ್ನು ಗಮನಿಸಿ ವಿಶೇಷವಾದ ಆದ್ಯತೆಯ ಮೇರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಉಪಾಧ್ಯಾಯರನ್ನು ನೇಮಿಸುವುದಕ್ಕೆ ಸರ್ಕಾರ ಈ ಆಜ್ಞೆಗೆ ವಿನಾಯ್ತಿ ಕೊಡುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದನ್ನು ನಾನು ಗಮನಿಸುತ್ತೇನೆ.

ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ಸಂದರ್ಶನ ನಡೆಸಂತ್ತಿರುವ ಬಗ್ಗೆ

೧೨(ಬಿ). ಶ್ರೀ ಲಕ್ಕಪ್ಪ.—ಮಾನ್ಯ ಮುಖ್ಯಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈಗ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಬೆರಳಚ್ಚು ಹಾಗೂ ಶೀಘ್ರಲಿಪಿಗಾರರ ನೇಮಕ ಮಾಡಲು ಸಮಿತಿಯೊಂದು ಸಂದರ್ಶನ ನಡೆಸುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಈ ತಹಲ್ವರಿಗೆ ಎಷ್ಟು ಹುದ್ದೆಗಳಿಗಾಗಿ ಸಂದರ್ಶನ ನಡೆಸಂತ್ತಿದ್ದಾರೆ. (ಇಲಾಖಾವಾರು ವಿವರ ಸಚಿವಾಲಯದ ವಿವರ ಹಾಗೂ ಶೀಘ್ರಲಿಪಿ ಮತ್ತು ಬೆರಳಚ್ಚುಗಾರರ ಬಗೆ ಪ್ರತ್ಯೇಕ ವಿವರ ಒದಗಿಸುವುದು).

ಇ) ಸದರಿ ಸಮಿತಿಯ ಬಗ್ಗೆ ಭ್ರಷ್ಟಾಚಾರದ ದೂರುಗಳೇನಾದರೂ ಸರ್ಕಾರಕ್ಕೆ ಬಂದಿವೆಯೆ ?

ಈ) ಹಾಗಿದ್ದಲ್ಲಿ ಅಂತಹ ದೂರುಗಳ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಹೌದು.

ಆ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ೪೨೫ ಶೀಘ್ರಲಿಪಿಗಾರರ ಮತ್ತು ೧೫೯೭ ಬೆರಳಚ್ಚುಗಾರರ ರಿಕ್ತ ಸ್ಥಾನಗಳಿಗೆ ಅಭ್ಯರ್ಥಿಗಳ ಸಂದರ್ಶನವನ್ನು ನಡೆಸಲಾಗುತ್ತಿದೆ. (ಇಲಾಖಾವಾರು ಖಾಲಿಯಿರುವ ಹುದ್ದೆಗಳ ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ಸೂಚಿಸಿದೆ).

ಇ) ಹೌದು.

ಈ) ದೂರುಗಳನ್ನು ಪರಿಶೀಲಿಸಲಾಗುತ್ತಿದೆ.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳನ್ನು ಸೂಚಿಸುವ ಪಟ್ಟಿ

ಕ್ರಮ ಸಂಖ್ಯೆ.	ಇಲಾಖೆ	ಖಾಲಿಯಿರುವ ಹುದ್ದೆಗಳ ಸಂಖ್ಯೆ	
		ಶೀಘ್ರಲಿಪಿಗಾರರು	ಬೆರಳಚ್ಚುಗಾರರು
೧	೨	೩	೪
೧	ವಾಣಿಜ್ಯ ತೆರಿಗೆ	೧೦೦	೧೪೦
೨	ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡ)	೫೫	೬೮೦
೩	ಸಚಿವಾಲಯ	೪೯	
೪	ಲೋಕಾಯುಕ್ತ	೩೦	೨
೫	ವಾಣಿಜ್ಯ ಮತ್ತು ಕೈಗಾರಿಕೆ	೨೮	೭೬
೬	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	೨೫	೮೫
೭	ಸಾರ್ವಜನಿಕ ಶಿಕ್ಷಣ	೧೫	೭೯
೮	ಕರ್ನಾಟಕ ಅಪಿಲೇಟ್ ಟ್ರಿಬ್ಯೂನಲ್	೧೨	
೯	ಅಭಿಯೋಗ	೧೧	
೧೦	ಸಹಕಾರ	೧೦	
೧೧	ತೋಟಗಾರಿಕೆ	೯	೧೪
೧೨	ಉದ್ಯೋಗ ಮತ್ತು ತರಬೇತಿ	೭	೩೫
೧೩	ಅಬಕಾರಿ	೭	೭
೧೪	ಆಹಾರ ಮತ್ತು ನಾಗರೀಕ ಸರಬರಾಜು	೬	೪೮
೧೫	ಮುಖ್ಯ ವಿದ್ಯುತ್ ಪರಿವೀಕ್ಷಣಾಲಯ	೬	೧
೧೬	ಗುಲ್ಬರ್ಗ ವಿಭಾಗಾಧಿಕಾರಿ	೬	
೧೭	ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರು	೫	೧೨
೧೮	ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ	೪	
೧೯	ಮಂಗಳೂರು ಜಿಲ್ಲಾಧಿಕಾರಿ	೪	೨೧
೨೦	ಗಣಿ ಮತ್ತು ಭೂ ವಿಜ್ಞಾನ	೩	೨೧
೨೧	ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	೩	
೨೨	ತೂಕ ಮತ್ತು ಅಳತೆ ಇಲಾಖೆ	೩	೨೫
೨೩	ಕೈಗಾರಿಕಾ ಟ್ರಿಬ್ಯೂನಲ್	೨	೧
೨೪	ಕರ್ನಾಟಕ ರಾಜ್ಯ ಪತ್ರಾಗಾರ	೨	೧೨
೨೫	ಭಾರತೀಯ ಕೆಡೆಟ್ ಕಾರ್ಪ್ಸ್	೨	
೨೬	ರಿಜಿಸ್ಟ್ರೇಷನ್ ಮತ್ತು ಸ್ಟ್ಯಾಂಪ್		೨
೨೭	ಡೈರೆಕ್ಟರ್ ಜನರಲ್ ಆಫ್ ಪೋಲೀಸ್	೨	೧
೨೮	ಕೃಷಿ ನಿರ್ದೇಶನಾಲಯ	೧	೩
೨೯	ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ	೧	೩

೧	೨	೩	೪
೩೦	ಸಕ್ಕರೆ ನಿರ್ದೇಶನಾಲಯ	೧	
೩೧	ಆಡಳಿತ ತರಬೇತಿ ಸಂಸ್ಥೆ	೧	೩೪
೩೨	ಅಗ್ನಿಶಾಮಕ ದಳ	೧	
೩೩	ಪ್ರವಾಸೋದ್ಯಮ	೧	
೩೪	ಸೈನಿಕ್ ಕಲ್ಯಾಣ ಮತ್ತು ಪುನರ್ವಸತಿ	೧	೧
೩೫	ಕಾಲೇಜು ಶಿಕ್ಷಣ		೫೩
೩೬	ಪಶುಸಂಗೋಪನ ಮತ್ತು ಪಶು ವೈದ್ಯ ಸೇವೆಗಳು		೩೫
೩೭	ಬೆಳಗಾಂ ಜಿಲ್ಲಾಧಿಕಾರಿ		೨೫
೩೮	ಖಜಾನೆ		೨೫
೩೯	ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ		೧೨
೪೦	ಜಿಲ್ಲಾಧಿಕಾರಿ, ಬೆಂಗಳೂರು		೧೦
೪೧	ಜಿಲ್ಲಾಧಿಕಾರಿ, ಹಾಸನ		೮
೪೨	ಯುವಜನ ಸೇವೆ ಮತ್ತು ಕ್ರೀಡಾ	೨೪	೨
೪೩	ಪೌರಾಡಳಿತ ಇಲಾಖೆ	೪	೬
೪೪	ಭಾಷಾಂತರ ಇಲಾಖೆ	೩	೪
೪೫	ಬಂದರು ಮತ್ತು ಒಳನಾಡು ಜಲಸಾರಿಗೆ	೧	೩
೪೬	ಜಿಲ್ಲಾಧಿಕಾರಿ, ಬೀದರ್		೭
೪೭	ಜಿಲ್ಲಾಧಿಕಾರಿ, ಮೈಸೂರು		೫
೪೮	ಜಿಲ್ಲಾಧಿಕಾರಿ, ಗುಲ್ಬರ್ಗ		೬
೪೯	ಜಿಲ್ಲಾಧಿಕಾರಿ ಮಂಡ್ಯ		೪
೫೦	ಪ್ರಿಯೂನಿವರ್ಸಿಟಿ ಶಿಕ್ಷಣ		೪
೫೧	ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆ		೩
೫೨	ರೆಡ್ ಡೇನ್ ಯೋಜನೆ		೨
೫೩	ಗಣಕ ಕೇಂದ್ರ		೧
	ಒಟ್ಟು	೪೨೫	೧,೫೧೭

ಶ್ರೀ ಬಿ. ಲಕ್ಕಪ್ಪ.—ಸ್ವಾಮಿ, ನನ್ನ ಮೊದಲನೆಯ ಪ್ರಶ್ನೆಗೆ "ಹೌದು" ಎಂದು ಉತ್ತರ ಕೊಟ್ಟಿದ್ದೀರಿ. ಇದರಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ? ಎಷ್ಟಕ್ಕೆ ಸಂದರ್ಶನವಾಗಿದೆ ? ಇಷ್ಟೊಂದು ವಿಳಂಬ ಮಾಡುತ್ತಿರುವುದಕ್ಕೆ ಕಾರಣವೇನು ? ಆಯ್ಕೆ ಸಮಿತಿಯ ಅಧ್ಯಕ್ಷರನ್ನು ಸರ್ಕಾರದವರು ಆಯ್ಕೆ ಮಾಡುವುದರಲ್ಲಿ ಏನಾದರೂ ವಿಳಂಬವಾಯಿತೆ ? ಇನ್ನೂ ದೂರುಗಳು ಏನಾದರೂ ಇವೆಯೇ? ಎಂದು ಕೇಳಿರುವುದಕ್ಕೆ "ಹೌದು" ಎಂದು ಹೇಳಿದ್ದೀರಿ. ನಿಮಗೆ ಎಂಥ ದೂರುಗಳು ಬಂದಿವೆ ? ಎಷ್ಟು ದೂರುಗಳು ಬಂದಿವೆ ? ಇದುವರೆಗೆ ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟು ಸಂದರ್ಶನಗಳನ್ನು ನಡೆಸಿದ್ದೀರಿ ? ಆಯ್ಕೆ ಸಮಿತಿಗೆ ಸದಸ್ಯರನ್ನು ನೇಮಕ ಮಾಡುವಾಗ ಯಾವ ಆಧಾರದ ಮೇಲೆ ನೇಮಕ ಮಾಡಿದ್ದೀರಿ ? ಆ ಸಮಿತಿಯಲ್ಲಿ ಒಟ್ಟು ಎಷ್ಟು ಜನರಿದ್ದಾರೆ ? ಯಾವ ಆಧಾರವನ್ನು ಇಟ್ಟುಕೊಂಡು ಬಂದಿರತಕ್ಕ ದೂರುಗಳನ್ನು ಪರಿಶೀಲಿಸುತ್ತೀರಿ ? ಯಾವಾಗ ಇದನ್ನು ಮುಕ್ತಾಯ ಮಾಡಂತ್ತೀರೆಂಬುದನ್ನು ದಯವಿಟ್ಟು ಕೂಲಂಕುಷವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಸಮಿತಿಯಲ್ಲಿ ೪ ಜನ ಅಧಿಕಾರಿಗಳು, ೫ ಜನ ಅಧಿಕಾರೇತರರು ಒಟ್ಟಿಗೆ ೯ ಜನ ಆ ಸಮಿತಿಯಲ್ಲಿದ್ದಾರೆ. ಈ ಅಧಿಕಾರೇತರರ ಪೈಕಿ ಕನಿಷ್ಠ ಒಬ್ಬ ಸದಸ್ಯರು ಪೆಡ್ಡೊಲ್ಡ್

ಕ್ಯಾಸ್ಟ್ ಅಥವಾ ಪೆಡ್ಯೂಲ್ಡ್ ಟ್ರೈಬ್‌ನವರೂ, ಒಬ್ಬ ಸದಸ್ಯರು ಹಿಂದುಳಿದ ವರ್ಗದವರು, ಒಬ್ಬ ಸದಸ್ಯರು ಮೈನಾರಿಟಿ ಕಮ್ಯುನಿಟಿಗೆ ಅಂದರೆ ಅಲ್ಪಸಂಖ್ಯಾತ ಕೋಮಿಗೆ ಸೇರಿದವರಾಗಿರಬೇಕು. ಇದು ಸರ್ಕಾರದ ನೀತಿ. ಸದಸ್ಯರ ಬ್ಯಾಕ್‌ಗ್ರೌಂಡ್ ಕ್ವಾಲಿಫಿಕೇಷನ್‌ನ್ನು ನೋಡಿಕೊಂಡು ನೇಮಕ ಮಾಡುತ್ತೇವೆ. ಇನ್ನು ಇಷ್ಟೊಂದೂ ತಡ ಏತಕ್ಕೆ ಆಯಿತೆಂಬುದು ಮಾನ್ಯ ಲಕ್ಕಪ್ಪನವರ ಪ್ರಶ್ನೆ. ಇದಕ್ಕೆ ಕಾರಣ ಜಿಲ್ಲಾ ಪರಿಷತ್ ಚುನಾವಣೆ ಬಂದಿದ್ದರಿಂದ ನಾವು ಈ ಸಂದರ್ಶನವನ್ನು ತಡೆಹಿಡಿದಿದ್ದೆವು. ಆ ಸಂದರ್ಭದಲ್ಲಿ ಯಾವುದೇ ನೇಮಕಾತಿ ಆಗಕೂಡದು, ಏಕೆಂದರೆ ಬೇರೆ ಬೇರೆ ರೀತಿಯಲ್ಲಿ ಪ್ರಭಾವ ಬರಬಹುದೆಂದು ನಾವು ಇಷ್ಟು ಕಾಲ ತಡೆಹಿಡಿದಿದ್ದರಿಂದ ಸ್ವಲ್ಪ ವಿಳಂಬವಾಯಿತು. ಬೇರೆ ಬೇರೆ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಇಂಟರ್‌ವ್ಯೂ ಆಗಿದೆ. ಗುಲ್ಬರ್ಗಾದಲ್ಲಿ ಸಂದರ್ಶನ ಮುಕ್ತಾಯವಾಗಿದೆ. ಇನ್ನೂ ಕೆಲವು ಕಡೆ ಮಾಡಬೇಕಾಗಿದೆ. ಇನ್ನು ಬಂದಿರತಕ್ಕ ಆಪಾದನೆ ಏನೆಂದರೆ, ಅಭ್ಯರ್ಥಿಗಳಿಂದ ಸಮಿತಿಯವರು ಲಂಚ ಕೇಳುತ್ತಿದ್ದಾರೆಂದು. ಇದರ ಬಗ್ಗೆ ನಾನು ಈಗಾಗಲೇ ತನಿಖೆ ಮಾಡಿಸುತ್ತಿದ್ದೇನೆ. ಇದರಲ್ಲಿ ಒಂದು ಆಪಾದನೆ ಏನೆಂದರೆ ಕ್ವಾಲಿಫೈಯಿಂಗ್ ಎಕ್ಸಾಮಿನೇಷನ್‌ನಲ್ಲಿ ಅತಿ ಹೆಚ್ಚಿಗೆ ಅಂಕಗಳನ್ನು ಪಡೆದ ಅಭ್ಯರ್ಥಿ ಇಂಟರ್‌ವ್ಯೂನಲ್ಲಿ ಅತಿ ಕಡಿಮೆ ಅಂಕಗಳನ್ನು ಪಡೆಯುತ್ತಿದ್ದಾನೆ, ಕ್ವಾಲಿಫೈಯಿಂಗ್ ಎಕ್ಸಾಮಿನೇಷನ್‌ನಲ್ಲಿ ಅತಿ ಕಡಿಮೆ ಅಂಕಗಳನ್ನು ಪಡೆದಿರುವ ಅಭ್ಯರ್ಥಿ ಇಂಟರ್‌ವ್ಯೂನಲ್ಲಿ ಅತಿ ಹೆಚ್ಚಿಗೆ ಅಂಕಗಳನ್ನು ಪಡೆಯುತ್ತಿದ್ದಾನೆ, ಈ ರೀತಿ ಸಮಿತಿಯಲ್ಲಿ ಒಂದು ಅನ್ಯಾಯವಾಗುತ್ತಿದೆಯೆಂಬ ದೂರು, ಆಪಾದನೆಗಳು ಬಂದಿವೆ. ಇದನ್ನು ಗಮನಿಸಿ ನಮ್ಮ ಸರ್ಕಾರ ಎರಡು ಕ್ರಮಗಳನ್ನು ತೆಗೆದುಕೊಂಡಿದೆ. ಮೊದಲನೆಯದು ಎಂದರೆ, ಕನ್ನಡ ಬೆರಳಚ್ಚು ಅಥವಾ ಶೀಘ್ರಲಿಪಿಗಾರರ ವಿಶೇಷ ರೀತಿಯದು. ಇದರಲ್ಲಿ ಅಭ್ಯರ್ಥಿಗಳಿಗೆ ಅತ್ಯಂತ ಹೆಚ್ಚಿನ ಮಾಹಿತಿ, ಜ್ಞಾನ, ಅಥವಾ ಅನುಭವ ಇರಬೇಕು ಇಲ್ಲದಿದ್ದರೆ ಈ ಕೆಲಸವನ್ನು ಸರಿಯಾಗಿ ಮಾಡುವುದಕ್ಕಾಗುವುದಿಲ್ಲ. ಇಲ್ಲಿ ನಾವು ಏನು ಭಾಷಣವನ್ನು ಮಾಡುತ್ತೇವೆ ಅದನ್ನು ಶೀಘ್ರಲಿಪಿಗಾರರು ಚೆನ್ನಾಗಿ ಬರೆದುಕೊಳ್ಳಬೇಕು. ಇಲ್ಲದಿದ್ದರೆ ನಾವು ಇಲ್ಲಿ ಏನು ಮಾತನಾಡುತ್ತೇವೆ, ಭಾಷಣ ಮಾಡುತ್ತೇವೆ ಅದೆಲ್ಲವೂ ವ್ಯರ್ಥವಾಗುತ್ತದೆ. ಆದ್ದರಿಂದ ಶೀಘ್ರಲಿಪಿಗಾರರಿಗೆ ವಿಶೇಷವಾದ ಒಂದು ಅರ್ಹತೆ ಇರಬೇಕಾಗುತ್ತದೆ. ಒಳ್ಳೆಯ ಕೌಶಲತೆ ಇರಬೇಕಾಗುತ್ತದೆ. ಈ ದೃಷ್ಟಿಯಿಂದ ಕ್ವಾಲಿಫೈಯಿಂಗ್ ಎಕ್ಸಾಮಿನೇಷನ್‌ನಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಮಾನ್ಯ ವಿರೋಧಪಕ್ಷದ ಸದಸ್ಯರು ಹೇಳಿದಂತೆ ಕಂಪ್ಯೂಟರೈಸ್ ಮಾಡಿ ಆಯ್ಕೆ ಮಾಡುವುದು ಒಂದು ವಿಧಾನ. ಇನ್ನು ಮತ್ತೊಂದು ವಿಚಾರ ಏನಿದೆ ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಎಲ್ಲಾ ಹುದ್ದೆಗಳಿಗೂ ಒಂದೇ ಸಮಿತಿ ಇರುವುದಕ್ಕೆ ಬದಲಾಗಿ ಒಟ್ಟು ೪ ವಿಭಾಗಗಳನ್ನಾಗಿ ವಿಂಗಡಿಸಿ ಬೇರೆ ಬೇರೆ ನೇಮಕಾತಿ ಸಮಿತಿಗಳನ್ನು ರಚಿಸಿ ಆಯಾಯ ಪ್ರದೇಶದಲ್ಲಿರತಕ್ಕ ಯೋಗ್ಯ, ಅರ್ಹ, ಅಭ್ಯರ್ಥಿಗಳನ್ನು ಆರಿಸುವುದರ ಮೂಲಕ ಅರ್ಹರಿಗೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ಉದ್ದೇಶವಿಟ್ಟುಕೊಂಡು, ಅವರಿಗೆ ಅನ್ಯಾಯವಾಗದ ರೀತಿಯಲ್ಲಿರುವಂತೆ ರೆಕ್ರೂಟ್‌ಮೆಂಟ್ ಮಾಡಬೇಕೆಂದಿದ್ದೇವೆ. ಇದರ ಬಗ್ಗೆ ಇನ್ನು ಒಂದೆರಡು ದಿವಸಗಳಲ್ಲಿ ನಾವು ಅಂತಿಮ ನಿರ್ಣಯವನ್ನು ತೆಗೆದು ಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಗೋಪಾಲ ಮುಂಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಬೆರಳಚ್ಚು ಮತ್ತು ಶೀಘ್ರಲಿಪಿಗಾರರ ಹುದ್ದೆಗೆ ನೇಮಕ ಮಾಡಿಕೊಳ್ಳುವಾಗ ಮಾರ್ಕ್ಸ್ ಮತ್ತು ಪರ್ಸೆಂಟೇಜ್‌ನ್ನು ಮುಖ್ಯವಾಗಿ ಪರಿಗಣನೆಗೆ ತೆಗೆದ ಕೊಳ್ಳುತ್ತಿಲ್ಲ. ೧೦ ಸಾವಿರ ೧೨ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಈ ರೀತಿಯಾಗಿ ಸೆಲೆಕ್ಷನ್ ಮಾಡುತ್ತಿದ್ದಾರೆ. ನಿಮ್ಮ ಸಮಿತಿಯವರ ಮೇಲೆ ಆರೋಪಗಳು ಬಂದಿರುತ್ತವೆಂದು ಹೇಳಬೇಕಾಗಿದೆ. ಮಾನ್ಯ ಹೆಗಡೆಯವರಿಗೂ ಇದು ಗೊತ್ತಿರುತ್ತದೆ. ಆದರೆ ಅವರು ಹೇಳುವುದಕ್ಕೆ ಭಯಪಡುತ್ತಿದ್ದಾರೆ. ನಿಜವಾಗಿಯೂ ನಿಮ್ಮ ಸರ್ಕಾರಕ್ಕೆ ಧೈರ್ಯ ಇದ್ದರೆ ಆ ಸಮಿತಿಯನ್ನು ಕ್ಯಾನ್ಸಲ್ ಮಾಡಿ, ಈಗ ಆಯ್ಕೆ ಮಾಡಿರತಕ್ಕಂಥವರನ್ನು ಕ್ಯಾನ್ಸಲ್ ಮಾಡಿ. ದಂಡ್ಡನ್ನು ಕೊಟ್ಟವರೂ ವಿಧಾನ ಸೌಧದ ಮುಂದೆ ಬರುತ್ತಾರೆ. ಎಷ್ಟು ದುಡ್ಡನ್ನು ಕೊಟ್ಟಿದ್ದಾರೆಂಬುದು ಆಗ ಗೊತ್ತಾಗುತ್ತದೆ. ೧೦–೧೨–೧೫ ಸಾವಿರ ರೂಪಾಯಿಗಳನ್ನು ತೆಗೆದುಕೊಂಡಿರತಕ್ಕಂಥದ್ದು ಪೇಪರ್‌ನಲ್ಲಿ ಬಂದಿರುತ್ತದೆ. ತಾವು ಇಲ್ಲಿ ಮುಚ್ಚುಮರೆ ಮಾಡುತ್ತಿರುತ್ತೀರಿ. ಎರಡು ಸಾವಿರದಿಂದ ೧೦ ಸಾವಿರದವರೆಗೆ ತೆಗೆದುಕೊಳ್ಳುತ್ತಿರತಕ್ಕಂಥದ್ದರ ಜನತಾ ಪಾರ್ಟಿಗೆ ಫಂಡ್ ಎಂದು ಹೇಳುತ್ತಿರುತ್ತಾರೆ. ನಾನು ಮಾನ್ಯ ಹೆಗಡೆಯವರನ್ನು ವಿನಂತಿ ಮಾಡಿಕೊಳ್ಳುತ್ತೇನೆ, ಅವರು ಏನೂ ಮಾಡಬೇಕಾಗಿಲ್ಲ. ಅವರದೂ ಭಷ್ಟಾಚಾರ ಸರ್ಕಾರವಲ್ಲವೆಂದೂ ಹೇಳುತ್ತಾರೆ, ಹೌದೋ ಅಲ್ಲವೋ ಎನ್ನುವುದನ್ನು

ಪ್ರೂವ್ ಮಾಡಂವುದಕ್ಕೆ ೇವತ್ತಿನವರೆಗೆ ಎಷ್ಟು ಜನರನ್ನು ಸೆಲೆಕ್ಷನ್ ಮಾಡಿದ್ದೀರಿ ಅಷ್ಟು ಜನರನ್ನು ಕ್ಯಾನ್ಸಲ್ ಮಾಡಿದ್ದೇವೆಂದು ಅನೌನ್ಸ್ ಮಾಡಿ. ನಾಳೆಯೇ ವಿಧಾನಸೌಧದ ಮುಂದೆ ದಂಡ್ಡನ್ನು ಕೊಟ್ಟವರು ಬರುತ್ತಾರೆ.

ಅಧ್ಯಕ್ಷರು.—ಮಾನ್ಯ ಕಾನಡೇಯಂವರೇ ಭಾಷಣವನ್ನು ಮಾಡುತ್ತೀರಿ, ದಯವಿಟ್ಟು ನೇರವಾಗಿ ಪ್ರಶ್ನೆಯನ್ನು ಕೇಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಮ್ಮ ಸರ್ಕಾರದವರು ೧೨–೧೫ ಸಾವಿರ ರೂಪಾಯಿ ಗಳನ್ನು ತೆಗೆದುಕೊಂಡು ಸೆಲೆಕ್ಷನ್ ಮಾಡಿದ್ದಾರೆ. ಇದೊಂದು ಅಪಮಾನವೆಂದು ತಿಳಿದುಕೊಂಡು ಲಿಸ್ಟನ್ನು ಕ್ಯಾನ್ಸಲ್ ಮಾಡಿ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಸದಸ್ಯರು ನಿಮ್ಮ ಸರ್ಕಾರವೆಂದು ಹೇಳಿರುತ್ತಾರೆ. ಅದನ್ನು ಕ್ಯಾನ್ಸಲ್ ಮಾಡಬೇಕು.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಸರಿಯಾಗಿ ಉತ್ತರವನ್ನು ಕೊಟ್ಟಿದ್ದಾರೆ. ಎನ್‌ಕ್ವೈರಿ ಮಾಡಿಸುತ್ತೇವೆಂದು ಹೇಳಿರುತ್ತಾರೆ. ಲಂಚ ತೆಗೆದುಕೊಂಡಿರುತ್ತಾರೆಂಬ ಆಪಾದನೆ ಬಂದಿದೆ ಎಂದೂ ಕೂಡ ಹೇಳಿರುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಗುರುತರವಾದ ಆರೋಪ ಗಳನ್ನು ಮಾಡಿರುವುದು ನಮಗೂ ಕೂಡ ತಿಳಿದುಬಂದಿರುತ್ತದೆ. ೧೨–೧೫ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಸಮಿತಿಯವರು ಸೆಲೆಕ್ಷನ್ ಮಾಡಿರತಕ್ಕಂಥದ್ದಕ್ಕೆ ಪ್ರೂಫ್ ತೆಗೆದುಕೊಂಡು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದೆ, ನನ್ನ ಹತ್ತಿರ ಕೂಡ ಕೆಲವು ಪತ್ರಗಳು ಬಂದಿವೆ. ಪತ್ರಗಳು ಬಂದಮೇಲೆ ನಾನು ಗೃಹಮಂತ್ರಿಗಳಿಗೆ ಅದನ್ನು ಕಳುಹಿಸಿ ಕೊಟ್ಟಿದ್ದೇನೆ. ಅದನ್ನು ಸಿ.ಐ.ಡಿ, ಮುಖಾಂತರ ತನಿಖೆ ಮಾಡಬೇಕಾಗಿದೆ. ಜನತಾ ಪಕ್ಷದ ಫಂಡ್‌ಗಾಗಿ ಹಣ ತೆಗೆದುಕೊಳ್ಳುತ್ತಿದ್ದಾರೆಂದು ಮಾನ್ಯ ಕಾನಡೆಯವರು ಹೇಳಿದರು, ಜನತಾ ಪಕ್ಷ ಇವರ ಫಂಡಿ ನಿಂದ ಬೇಳೆಯಬೇಕಾಗಿಲ್ಲ. ಅಭ್ಯರ್ಥಿಗಳು ನೌಕರಿಗಾಗಿ ಎಷ್ಟೋ ದಿವಸಗಳಿಂದ ಕಾಯುತ್ತಿದ್ದಾರೆ. ಇವರಿಂದ ಒಂದು ಕಾಸನ್ನು ತೆಗೆದುಕೊಳ್ಳುವಂಥದ್ದು ಅದಕ್ಕಿಂತ ಘೋರವಾದ ಪಾಪ ಬೇರೊಂದು ಇಲ್ಲ. ಅನೇಕ ಜನ ೬ ಗಂಟೆಗೆ ನಮ್ಮ ಮನೆಯ ಮುಂದೆ ಬರುತ್ತಾರೆ. ಅವರಲ್ಲಿ ಕನಿಷ್ಟ ಪಕ್ಷ ೮ ಜನ ನಾಳೆ ನಾಳಿದ್ದು ಒಂದು ವಾರದಲ್ಲಿ ನೌಕರಿಗಾಗಿ ಇಂಟರ್‌ವ್ಯೂಗಾಗಿ ಕರೆದಿರುವಂಥವರೂ ಕೂಡ ನಿಂತು ಕೊಂಡಿರುತ್ತಾರೆ. ನಮಗೇನಾದರೂ ಸಹಾಯ ಮಾಡಿ ನೌಕರಿಯನ್ನು ಕೊಡಿಸಿ ಎಂದು ಕೇಳುತ್ತಾರೆ. ನಾನು ಅವರನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕರೆದು ಲಂಚವನ್ನು ಕೇಳಿದರೆ, ಯಾರಾದರೂ ಸದಸ್ಯರನ್ನು ನೋಡಿದರೆ ಎಂದು ಕೇಳಿದ್ದಕ್ಕೆ ಅವರು ಏನು ಹೇಳಿದರು ಎಂದರೆ ಯಾರಿಗೂ ಲಂಚ ಕೊಟ್ಟಿಲ್ಲವೆಂದು ಹೇಳಿದರು. ಆದ್ದರಿಂದ ಕಮಿಟಿಯ ಮೇಲೆ ಇರತಕ್ಕಂಥ ಗಂಭೀರವಾದ ಆರೋಪವನ್ನು ನಿವಾರಣೆ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದರ ಬಗ್ಗೆ ನಾನು ಈಗಾಗಲೇ ಯೋಚನೆ ಮಾಡಿದ್ದೇನೆ. ಇನ್ನು ಎರಡು ದಿವಸದಲ್ಲಿಯೇ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ಯಾವ ರೀತಿ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆಂದು ಈಗ ಹೇಳುವುದಕ್ಕೆ ತಯಾರಾಗಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಕಮಿಟಿ ಸದಸ್ಯರನ್ನು ನೇಮಕ ಮಾಡಿದವರು ಯಾರು? ಮಾನ್ಯ ಪಟೇಲರು ಹೇಳುತ್ತಾರೆ, ನಮ್ಮ ನಿಲುವೇ ಅದು, ಸದಸ್ಯರನ್ನು ನೇಮಕ ಮಾಡುವುದು ಹಾಗೆಯೇ ನಮ್ಮ ರಾಜಕೀಯ ಧೋರಣೆಯೇ ಅದು ಎಂದು ಹೇಳುತ್ತಾರೆ. ಹಾಗಿದ್ದ ಮೇಲೆ ಆ ಕಮಿಟಿಯನ್ನು ನೇಮಿಸಿದವರು ಯಾರು ?

ಶ್ರೀ ರಾಮಕೃಷ್ಣ ಹೆಗಡೆ.—ಕಮಿಟಿಯನ್ನು ಸರ್ಕಾರ ನೇಮಕ ಮಾಡಿದೆ. ಮಾನ್ಯ ವೆಂಕಟ ರಾವಯ್ಯನವರು ಹೇಳಿದ ಹಾಗೆ, ಇಲ್ಲಿ ಆರೋಪ ಬಂದಿರತಕ್ಕದ್ದು ಸದಸ್ಯರ ಮೇಲೆ ಅಲ್ಲ. ಹೆಚ್ಚಾಗಿ ಛೇರ್ಮನ್ ಮೇಲೆ, ಆದಕ್ಕಾಗಿ ಹೇಳಿದೆ, ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೆವೆಂದೂ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್ ಅವರೇ ನಿಮ್ಮ ಪ್ರಶ್ನೆ ಕೇಳಿ.

(ಗೊಂದಲ)

ಅಧ್ಯಕ್ಷರು.—ಅವರು ಉತ್ತರ ಸರಿಯಾಗಿ ಹೇಳಿದ್ದಾರೆ. ಮತ್ತೆ ಅವಕಾಶ ಕೊಡುವುದಿಲ್ಲ. ಮಾನ್ಯ ಲಕ್ಕಪ್ಪನವರೆ, ಮಧ್ಯಾಹ್ನ ಭಾಷಣ ಮಾಡುವುದಕ್ಕೆ ಅವಕಾಶ ಇದೆ. ಆಗ ಭಾಷಣ ಮಾಡುವಿರಂತೆ. ಈಗ ತಮಗೆ ಅವಕಾಶ ಕೊಡುವುದಿಲ್ಲ. ದಯವಿಟ್ಟು ಇಬ್ಬರೂ ಕುಳಿತುಕೊಳ್ಳಿ.

ಶ್ರೀ ಬಿ. ಲಕ್ಕಪ್ಪ.—ಇಷ್ಟೆಲ್ಲ ಅನ್ಯಾಯ ನಡೆದಿದೆ. ಅದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

ಶ್ರೀ ಎಂ. ವಂಲ್ಲಿಕಾರ್ಜುನ ಖರ್ಗೆ.—ಪ್ರಶ್ನೆ ಅವರದ್ದೇ ಆಗಿರುವುದರಿಂದ ಸಪ್ಲಿಮೆಂಟರಿ ಕೇಳಲಿ.

ಶ್ರೀ ಬಿ. ಲಕ್ಕಪ್ಪ.—ನಾನು ಸಪ್ಲಿಮೆಂಟರಿ ಕೇಳಲಿಲ್ಲ. ಆಯ್ಕೆ ಸಮಿತಿ ಅಧ್ಯಕ್ಷರು ಯಾರು? ಆರೋಪ ಇರತಕ್ಕದ್ದು ಛೇರ್ಮನ್ ಒಬ್ಬರ ಮೇಲೆ ಜನತಾ ಪಕ್ಷದ ಫಂಡಿಗೋಸ್ಕರ ಹಣ ಸಂಗ್ರಹ ಮಾಡುತ್ತಿದ್ದೇವೆಂದು ಸದಸ್ಯರು ಹಣ ತೆಗೆದುಕೊಂಡಿದ್ದಾರೆ. ಆಯ್ಕೆ ಸರಿಯಾಗಿ ನಡೆದಿಲ್ಲ. ಬರೀ ಹಣದ ಮೇಲೆ ನಡೆದಿದೆ. ಆದ್ದರಿಂದ ಇದನ್ನು ರದ್ದುಪಡಿಸತಕ್ಕ ಕೆಲಸ ಮಾಡುತ್ತೀರಾ? ಛೇರ್ಮನ್ ಮಂತ್ರಿ ಸದಸ್ಯರ ಮೇಲೆ ಏನು.....

ಅಧ್ಯಕ್ಷರು.—ಏನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಬಿ. ಲಕ್ಕಪ್ಪ.—ಅದನ್ನು ನಿರ್ದಿಷ್ಟವಾಗಿ ಹೇಳಬೇಕು.

ಅಧ್ಯಕ್ಷರು.—ಅವರು ಉತ್ತರ ಹೇಳಂವಾಗ ತಾವು ಕೇಳುವುದಿಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ನಾನು ಏನು ಹೇಳಿದ್ದೇನೆ ಅದಕ್ಕಿಂತ ಹೆಚ್ಚು ಹೇಳುವುದಕ್ಕೆ ಈ ಸಂದರ್ಭದಲ್ಲಿ ಬಯಸುವುದಿಲ್ಲ. ಜನತಾ ಪಕ್ಷಕ್ಕೆ ಬೇಕಾದ ಫಂಡನ್ನು ಬಡ ಅಭ್ಯರ್ಥಿಗಳಿಂದ ತೆಗೆದು ಕೊಳ್ಳತಕ್ಕ ಪಕ್ಷ ನಮ್ಮದಲ್ಲ.

(ಗೊಂದಲ)

ಅಧ್ಯಕ್ಷರು.— ನಿಮಗೆ ಪ್ರಶ್ನೆ ಕೇಳುವುದು ಮಾತ್ರ ಬೇಕು. ಉತ್ತರ ಏನು ಹೇಳುತ್ತಾರೆಂಬುದನ್ನು ಕೇಳುವುದಕ್ಕೆ ತಯಾರಿಲ್ಲ ಅಂದರೆ ಅರ್ಥವೇನು?

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.— ಜನತಾ ಪಕ್ಷಕ್ಕೆ ಹಣ ಬೇಕಾಗಿಲ್ಲವೆಂದು ಹೇಳಿದರು.

ಅಧ್ಯಕ್ಷರು.— ಇನ್ನೊಮ್ಮೆ ಹೇಳುತ್ತಾರೆ ತಾವು ಕುಳಿತುಕೊಳ್ಳಿ ಈಗ ಟೈಂ ನೋಡಿ ಎಷ್ಟಾಗಿದೆ?

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್ — ಭ್ರಷ್ಟಾಚಾರದ ಆಪಾದನೆ ಈ ಜನರ ಮೇಲೆ ಬಂದಿರುವುದರಿಂದ ಸಭೆಯ ಎದುರಿಗೆ ಅವರ ಹೆಸರು ಹೇಳಿ., ಹಿಂದೆ ಹೇಳಿದಂತೆ ಅಂದರೆ ಭ್ರಷ್ಟಾಚಾರದ ಬಗ್ಗೆ ಆರೋಪ ಇರುವವರನ್ನು ಲೋಕಾಯುಕ್ತಕ್ಕೆ ಅಥವಾ ಉಪಲೋಕಾಯುಕ್ತಕ್ಕೆ ಕಳುಹಿಸುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.— ವಿರೋಧ ಪಕ್ಷದ ಮಾನ್ಯ ಸದಸ್ಯರಿಂದ ಈಗ ಎರಡು ಸೂಚನೆಗಳು ಬಂದಿವೆ. ಮೊದಲನೆಯದು, ಈಗ ಆಗಿರತಕ್ಕ ಸಂದರ್ಶನ ಇರಬಹುದು. ಅಥವಾ ಅದಕ್ಕೆ ತಯಾರು ಮಾಡಿಕೊಂಡಿರುವುದು ಇರಬಹುದು, ಸಿದ್ಧತೆ ಮಾಡಿಕೊಂಡಿರಬಹುದು ಅದನ್ನೆಲ್ಲ ಕ್ಯಾನ್ಸಲ್ ಮಾಡಿ ಎಂದು. ಎರಡನೆಯದು; ಆರೋಪ ಏನು ಬಂದಿದೆ ಅದನ್ನು ಲೋಕಾಯುಕ್ತಕ್ಕೆ ರೆಫರ್ ಮಾಡಿ ಎಂದ ಆರೋಪವನ್ನು ಲೋಕಾಯುಕ್ತಕ್ಕೆ ರೆಫರ್ ಮಾಡುತ್ತೇನೆ. ಅದನ್ನು ಕ್ಯಾನ್ಸಲ್ ಮಾಡುವ ವಿಚಾರದಲ್ಲಿ ನಾವು ಒಂದು ನಿರ್ಣಯ ತೆಗೆದುಕೊಳ್ಳಬೇಕಿದ್ದೇವೆ. ಆದ್ದರಿಂದ, ಅದು ಏನು ಎಂದು ಈಗ ಹೇಳ ಬಯಸುವುದಿಲ್ಲ. ಯಾವ ಯಾವ ಅಭ್ಯರ್ಥಿಗಳಿಂದ ದುಡ್ಡನ್ನು ಕೇಳಿದ್ದಾರೋ, ತೆಗೆದುಕೊಂಡಿದ್ದಾರೋ

ಆ ಅಭ್ಯರ್ಥಿಗಳು ದಯವಿಟ್ಟು ಲೋಕಾಯುಕ್ತಕ್ಕೆ ಒಂದು ಅರ್ಜಿಯನ್ನು ಹಾಕಬೇಕೆಂದು ಈ ಸದನದ ಮುಂಖಾಂತರವಾಗಿ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೆ, ೧೫ನೇ ಅಲ್ಪಕಾಲಾವಧಿ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಬಿ ರಾಚಯ್ಯ.— ಸಾರ್, ಇದರಲ್ಲಿ...

ಅಧ್ಯಕ್ಷರು.— ನಾಳೆ ಬೇಕಾದರೆ ಹೇಳಿ. ನಾಳೆ ಇಡುತ್ತೇನೆ.

ಶ್ರೀ ಬಿ. ರಾಚಯ್ಯ.— ನಾಳೆ ಹೇಳುತ್ತೇನೆ.

ಅಧ್ಯಕ್ಷರು.— ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ಆರ್. ವೆಂಕಟರಾವಯ್ಯ.— ನಾನು ಒಂದು ನಿವಿಷ ಲೇಟಾಗಿ ಬಂದೆ.

ಅಧ್ಯಕ್ಷರು.— ನಾನು ಮೊದಲು ಕರೆದಾಗ ತಾವು ಅಬ್‌ಸೆಂಟ್ ಇದ್ದಿರಿ. ಪದ್ಧತಿ ಏನು ಎಂಬುದನ್ನು ಕೇಳಿ, ತಾವು ವಕೀಲರಿದ್ದೀರಿ. ಕಾಯಿದೆ ಹೇಳಿಕೊಡಬೇಕಾಗಿಲ್ಲ. ನಾನು ಹೇಳುವುದು ಕೇಳಿ. ಕ್ವಶ್ಚನ್ ಅವರ್ ೧೨ಕ್ಕೆ ಮೊದಲೇ ಮುಂಗಿದ್ದರೆ ಅಬ್ಸೆಂಟ್ ಆದವರನ್ನು ಮತ್ತೆ ಕರೆಯುವ ಪರಿಪಾಠ ಇದೆ ಈಗ ಕ್ವಶ್ಚನ್ ಅವರ್ ಮುಗಿದಿದೆ. ಮತ್ತೆ ಕರೆಯುವುದಕ್ಕೆ ಬರುವುದಿಲ್ಲ. ಕುಳಿತುಕೊಳ್ಳಿ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿಗಳು

ಜಮಖಂಡಿಯಲ್ಲಿ ಸಾರ್ವಜನಿಕ ಆಸ್ಪತ್ರೆಗೆ ಆಂಬ್ಯುಲೆನ್ಸ್ ಮತ್ತು ಜನರೇಟರ್‌ಗಳ ಪೂರೈಕೆ

೧೫೧. ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).— ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಮಖಂಡಿ ನಗರದಲ್ಲಿ ಒಂದು ಸಾರ್ವಜನಿಕ ಆಸ್ಪತ್ರೆ ಮತ್ತು ಮುಧೋಳ್ ಮಹಾಲಿಂಗಪುರ, ಬನಹಟ್ಟಿ, ತೇರದಾಳ್, ಸವಳಗಿ ಹೀಗೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸರ್ಕಾರಿ ಆಸ್ಪತ್ರೆಗಳಿರುವುದರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಎಲ್ಲ ಆಸ್ಪತ್ರೆಗಳಿಗೆ ಮತ್ತು ಗ್ರಾಮಾಂತರ ಪ್ರದೇಶಗಳ ರೋಗಿಗಳ ಅನುಕೂಲಕ್ಕಾಗಿ ಜಮಖಂಡಿ ಸಾರ್ವಜನಿಕ ಆಸ್ಪತ್ರೆಗೆ ಒಂದು ಸುಸಜ್ಜಿತ ಆಂಬ್ಯುಲೆನ್ಸ್ ಮತ್ತು ಒಂದು ಜನರೇಟರ್‌ಗಳ ಪೂರೈಕೆಯ ಕುರಿತು ಸರ್ಕಾರದವರು ಆಲೋಚನೆ ಮಾಡಿರುವರೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು).—

ಅ) ಬಂದಿದೆ.

ಆ) ೧೯೮೭-೮೮ನೇ ಸಾಲಿನಲ್ಲಿ ಒಂದು ಆಂಬ್ಯುಲೆನ್ಸ್ ವಾಹನವನ್ನು ಮತ್ತು ಒಂದು ಜನರೇಟರನ್ನು ಒದಗಿಸಲು ಪ್ರಯತ್ನ ಮಾಡಲಾಗುವುದು.

ಮೈಸೂರಿನಲ್ಲಿರುವ ಅತಿಥಿಗಳ ವಸತಿ ಗೃಹಕ್ಕಾಗಿ ಸರಕಾರದವರು ಮಾಡಿದ ವೆಚ್ಚ ವೆಷ್ಟು

೧೫೫. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ),— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಮೈಸೂರು ನಗರದಲ್ಲಿ ಕಟ್ಟಿಸಿರುವ ಅತಿಥಿಗೃಹಗಳಿಗಾಗಿ ಸರ್ಕಾರದವರು ವೆಚ್ಚಮಾಡಿದ ಹಣವೆಷ್ಟು ?

ಆ) ಈ ವಸತಿ ಗೃಹಗಳು ಈಗ ಸರ್ಕಾರದ ಯಾವ ಇಲಾಖೆಯ ಹತ್ತೋಟಿಯಲ್ಲಿದೆ ?